**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 33/2023** **ಪಿ.ಡಬ್ಲ್ಯು.1**

**ಸಿ.ಡಬ್ಲ್ಯು.1**

| | | |
|---|---|---|
| ಸಾಕ್ಷಿದಾರರ ಹೆಸರು | - | ಚಂದ್ರಹಾಸ ಶೆಟ್ಟಿ |
| ತಂದೆಯ ಹೆಸರು | - | ದಾಬಾ ಶೆಟ್ಟಿ |
| ವಯಸ್ಸು | - | 60 ವರ್ಷ |
| ಉದ್ಯೋಗ | - | ಕ್ಯಾಟರಿಂಗ್ |
| ವಿಳಾಸ | - | ಕಾಪು |

ದಿನಾಂಕಃ 07.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಮೃತ ಶರತ್ ಶೆಟ್ಟಿ ನನ್ನ ಹೆಂಡತಿಯ ತಮ್ಮ. ಸುಮಾರು 3 ವರ್ಷದ ಹಿಂದೆ ಆತನ ಕೊಲೆಯಾಗಿದೆ. ಕೊಲೆಯಾದ ದಿನ ನಮ್ಮ ಊರಿನಲ್ಲಿ ಬಬ್ಬುಸ್ವಾಮಿ ದೇವಸ್ಥಾನದ ಕೋಲ ಇತ್ತು. ಆತ ಕೊಲೆಯಾದ ದಿನ 03-30 ಗಂಟೆಗೆ ನಾನು ಮತ್ತು ನನ್ನ ಹೆಂಡತಿ ಬಬ್ಬುಸ್ವಾಮಿ ದೇವಸ್ಥಾನದ ಕೋಲಕ್ಕೆ ಹೋಗಿದ್ದೇವು. ಆ ಸಮಯದಲ್ಲಿ ಶರತ್ ಕೋಲದಲ್ಲಿದ್ದ. ನಂತರ ನಾನು 04.30 ಗಂಟೆಗೆ ಸುಮಾರಿಗೆ ನಾನು ಮತ್ತು ನನ್ನ ಹೆಂಡತಿ ವಾಪಸ್ಸು ಮನೆಗೆ ಬಂದಿರುತ್ತೇವೆ. ಸಂಜೆ ಸುಮಾರು 05-30 ಗಂಟೆಗೆ ನಾನು ಮನೆಯಲ್ಲಿದ್ದಾಗ ಚಾ.ಸಾ.2 ರಾಜೇಶ್ ಶೆಟ್ಟಿ ನನಗೆ ದೂರವಾಣಿ ಕರೆ ಮಾಡಿ ಶರತ್ ಈತನನ್ನು ಉಡುಪಿ - ಮಂಗಳೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿ ಪಾಂಗಾಳದ ವಿಶ್ವಕರ್ಮ ಫರ್ನಿಚರ್ ಅಂಗಡಿ ಬಳಿ ಚೂರಿಯಿಂದ ತಿವಿದು ಕೊಲೆ ಮಾಡಿರುತ್ತಾರೆಂದು ತಿಳಿಸಿದರು ಮತ್ತು ಆತನನ್ನು ಉಡುಪಿಯ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ತಕ್ಷಣ ನಾನು ನನ್ನ ಸ್ನೇಹಿತ ಪ್ರಶಾಂತ ಈತನೊಂದಿಗೆ ಆಸ್ಪತ್ರೆಗೆ ಬಂದು ನೋಡಲಾಗಿ ಮತ್ತು ವಿಚಾರಿಸಲಾಗಿ ಆತ ದಾರಿ ಮಧ್ಯದಲ್ಲಿಯೇ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಆತನ ಹೃದಯ ಭಾಗ ಮತ್ತು ಇನ್ನಿತರ ದೇಹದ ಭಾಗಗಳಲ್ಲಿ ಆಯಧದಿಂದ ಮಾಡಿದ ಗಾಯಗಳು ಕಂಡುಬಂದವು. ಆತನ ಬಟ್ಟೆಗೆಲ್ಲಾ ರಕ್ತವಾಗಿತ್ತು.

2. ನಂತರ ನಾನು ಕಾಪು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 1(ಎ) ಎಂದು ಗುರುತಿಸಲಾಯಿತು.

3.ಆರೋಪಿ ಯೋಗೀಶ್ ಆಚಾರ್ಯ ಈತನ ಪರಿಚಯ ಇದೆ. ಆತ ನಮ್ಮ ಊರಿನವನು. ಆರೋಪಿ ಯೋಗೀಶ್ ಆಚಾರ್ಯ ಮತ್ತು ಶರತ್ ಒಬ್ಬರಿಗೊಬ್ಬರು ತಿಳಿದವರಾಗಿರುತ್ತಾರೆ. ಯೋಗೀಶ ಆಚಾರ್ಯ ಈ ಹಿಂದೆ ದುಬೈನಲ್ಲಿ ವಾಸ ಮಾಡಿಕೊಂಡಿದ್ದು, ನಂತರ ವಿದೇಶದಿಂದ ವಾಪಸ್ಸು ಬಂದು ಲ್ಯಾಂಡ್ ಲಿಂಕ್ಸ್ ವ್ಯವಹಾರ ಮಾಡಿಕೊಂಡಿದ್ದನು. ಒಮ್ಮೆ ಯೋಗೀಶ ಆಚಾರ್ಯ ಮತ್ತು ಇನ್ನೊಬ್ಬರ ನಡುವೆ ಜಾಗದ ವಿಚಾರದಲ್ಲಿ ಗಲಾಟೆ ಯಾಗುವಾಗ ಎದುರು ಪಾರ್ಟಿಯವರು ಯೋಗೇಶನ ಮೇಲೆ ಹಲ್ಲೆ ಮಾಡಿದ್ದು, ಆ ಸಮಯ ಮೃತ ಶರತ್ ಯೋಗೀಶನ ಪರವಾಗಿ ನಿಲ್ಲಲ್ಲಿಲ್ಲ ವೆಂದು ಯೋಗೀಶನಿಗೆ ಅಸಮಾಧಾನ ಇತ್ತು. ಇದೇ ಕಾರಣದಿಂದ ಯೋಗೀಶ ಆಚಾರ್ಯ ಉಳಿದ ಆರೋಪಿತರೊಂದಿಗೆ ಸಂಚು ರೂಪಿಸಿ ಮೃತ ಶರತ್ ಈತನನ್ನು ಕೊಲೆ ಮಾಡಿರುವ ವಿಚಾರ ತಿಳಿದುಬಂತು. ಈ ವಿಚಾರವಾಗಿ ಪೊಲೀಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ 1,3,4,5,7 ಪರವಾಗಿ ಶ್ರೀ ವೈ ಟಿ ಆರ್ ವಕೀಲರಿಂದಃ**

ರಾಜೇಶ್ ರವರ ಫೋನ್ ನಂಬರ್ ಹೇಳಲು ಆಗುವುದಿಲ್ಲ. ನಾನು ಆಸ್ಪತ್ರೆಗೆ ಹೋದಾಗ ಸಂಜೆ 06-00 ಗಂಟೆ ಆಗಿತ್ತು. ಆದರ್ಶ ಆಸ್ಪತ್ರೆಯಲ್ಲಿ ನಾನು ಸುಮಾರು 01.00 ಗಂಟೆ ಇದ್ದೇನು. ಅಲ್ಲಿಂದ ಮೃತ ಶರೀರದ ಜೊತೆ ಕೆ ಎಂಪಿ ಆಸ್ಪತ್ರೆಗೆ ಹೋಗಿರುತ್ತೇನೆ. ಕೆ ಎಂಪಿ ಆಸ್ಪತ್ರೆಯಲ್ಲಿ ಸುಮಾರು 01.00 ಗಂಟೆ ಇದ್ದೆನು. ಕೆ ಎಂಪಿ ಆಸ್ಪತ್ರೆಯಿಂದ ಮನೆಗೆ ಹೋದೆನು. ಮನೆಗೆ ಹೋದಾಗ ಸುಮಾರು ರಾತ್ರಿ 11.00 ಗಂಟೆ ಆಗಿತ್ತು. ಮರುದಿವಸ ಸಂಜೆಯ ಸಮಯದಲ್ಲಿ ನಾನು ಪೋಲಿಸರನ್ನು ಭೇಟಿ ಆಗಿದ್ದೇನು. ಆ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಆರೋಪಿತರಾದ ದಿವೇಶ್, ನಾಗರಾಜ್ ಮತ್ತು ಮುಖೇಶ ಇದ್ದರು. ಪ್ರಕರಣದ ವಿಚಾರ ನನಗೆ ಪೊಲೀಸರು ಹೇಳಿರುತ್ತಾರೆ. ಘಟನೆಯ ಒಂದೂವರೆ ತಿಂಗಳ ಪೂರ್ವದಲ್ಲಿ ಜಾಗದ ವಿಚಾರದ ಬಗ್ಗೆ ಗಲಾಟೆಯಾಗಿರುತ್ತದೆ. ಸದ್ರಿ ಜಾಗದ ವಿಚಾರದಲ್ಲಿ ಶರತ್ ಮತ್ತು ಯೋಗೀಶ್ ಆಚಾರ್ಯ ಒಟ್ಟಿಗೆ ಹೋಗಿರುತ್ತಾರೆ. ಅಲ್ಲಿ ಜಾಗದ ವಿಚಾರದಲ್ಲಿ ಗಲಾಟೆ ಆಗಿರುತ್ತದೆ. ಅದು ಯಾರ ಜಾಗ ಎಂದು ನನಗೆ ಗೊತ್ತಿಲ್ಲ.

2. ಮೃತ ಶರತ್ ಮೇಲೆ ಇದ್ದ ಬೇರೆ ಕ್ರಿಮಿನಲ್ ಮೊಕದ್ದಮೆಗಳ ಬಗ್ಗೆ ಗೊತ್ತಿಲ್ಲ. ಜಾಗದ ವಿಚಾರದಲ್ಲಿ ಗಲಾಟೆ ಆದ ಬಗ್ಗೆ ಸಹ ಶರತ್ ಮೇಲೆ ಪ್ರಕರಣ ದಾಖಲಾಗಿದೆ ಎಂದು ಗೊತ್ತಿಲ್ಲ. ದೂರನ್ನು ಕೊಟ್ಟ ನಂತರದಲ್ಲಿ ಪೊಲೀಸರನ್ನು ಭೇಟಿ ಆಗಿದ್ದೇನೆ ಆದರೆ ಯಾವಾಗ ಭೇಟಿ ಆಗಿದ್ದೇನು ಎಂದು ಹೇಳಲು ಆಗುವುದಿಲ್ಲ. ಪ್ರಕರಣದ ವಿಚಾರವನ್ನು ಪೊಲೀಸರು ನನಗೆ ನಂತರದ ಭೇಟಿ ಸಮಯದಲ್ಲಿ ಹೇಳಿರುತ್ತಾರೆ. ಶರತ್ ನನ್ನ ಭಾವ ನೆಂಟ ಆದ ಕಾರಣ ಪೊಲೀಸರ ಹೇಳಿಕೆಯ ಪ್ರಕಾರ ಸುಳ್ಳು ದೂರನ್ನು ದಾಖಲಿಸಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜೇಶ್ ನನಗೆ ಯಾವುದೇ ಕರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ 2 ಮತ್ತು 5 ಪರವಾಗಿ ವಕೀಲರಿಂದಃ</u>** ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಮರು ವಿಚಾರಣೆ -</u>** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.

SC.33/23
ಪಿಡಬ್ಲ್ಯು1